ಅದನ್ನು vacate ಮಾಡಿಸಿ ಅವರಿಗೆ stay ಕೊಡುವುದಕ್ಕೆ strong ground ಇರುವುದಿಲ್ಲ, still ಹೇಗೋ stay ತೆಗೆದುಕೊಂಡು ಬಂದು ಬಿಡುತ್ತಾರೆ. ಅದನ್ನು vacate ಮಾಡಿಸಿ, ಇನ್ನು ಮುಂದೆ ಯಾವ ಡಾಕ್ಟರ್‌ಗಳನ್ನು ಬೇರೆ ಇಲಾಖೆಗಳಿಗೆ deputation ಮೇಲೆ ಕಳುಹಿಸಿಕೊಡುವುದಿಲ್ಲವೆಂದು ತೀರ್ಮಾನ ಮಾಡಿ. ಅದರಲ್ಲೂ particular ಆಗಿ E.O.ಗಳಾಗಿ ಕಳುಹಿಸಿಕೊಡುವುದಿಲ್ಲವೆಂದು ತೀರ್ಮಾನ ಮಾಡಿ. ಆ ರೀತಿ ಮಾಡಿದರೆ ಡಾಕ್ಟರ್‌ಗಳು ಅಲ್ಲೇ ಉಳಿದುಕೊಳ್ಳುತ್ತಾರೆ, ಮತ್ತೆ ಖಾಲಿ ಇರುವ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಿ. ಇದರ ಜೊತೆಗೆ ಹೊಸ institutionಗಳನ್ನು ಮಾಡಿದರೆ ಡಾಕ್ಟರ್‌ಗಳು ಎಲ್ಲಿ ಇದ್ದಾರೆ ? ನೀವು ಒಂದು institution ಅನ್ನು ಕೊಡಲಿಲ್ಲ. ನಾನು 3–4 ವರ್ಷಗಳಿಂದ ಹೊಸದಾಗಿ institutionಗಳನ್ನು ಕೊಡಿ ಎಂದು ಪತ್ರವನ್ನು ಬರೆದಿದ್ದೇನೆ. ಇವತ್ತಿನವರೆಗೂ ಜನರು ಕೇಳಿದರೆ, ಎಲ್ಲೂ ಕೂಡ ಹೊಸ institution ಇಲ್ಲ. ಅಲ್ಲಿ ಜಾನುವಾರುಗಳಿಗೆ ರೋಗ ಬಂದರೆ, ಅದನ್ನು ವಾಸಿ ಮಾಡಲು ಡಾಕ್ಟರ್‌ಗಳು ಇರುವುದಿಲ್ಲ. ಈ ರೀತಿ ಆದರೆ ಏನು ಮಾಡುತ್ತೀರಿ ? ಜಾನುವಾರುಗಳ ಅಭಿವೃದ್ಧಿ ಆಗುವುದು ಹೇಗೆ ? ದಯಮಾಡಿ ತಾವು ಇದನ್ನು ಪರಿಶೀಲನೆ ಮಾಡಿ. ಇದನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳಬೇಕು. ಅದರಂತೆ ಕ್ರಮ ತೆಗೆದುಕೊಳ್ಳುವಂಥ ಕೆಲಸವನ್ನು ಮಾಡಬೇಕು.

ಶ್ರೀ ಹೆಚ್.ಕೆ. ಕುಮಾರಸ್ವಾಮಿ :– ಮಾನ್ಯ ಅಧ್ಯಕ್ಷರೆ, ಈಗ ಪಶುಸಂಗೋಪನೆ ಇಲಾಖೆಯಲ್ಲಿ ಆಯ್ಕೆ ಆಗಿರುವವರಿಗೆ ಕೆಲಸ ಮಡುವುದಕ್ಕೆ ಆಸಕ್ತಿ ಇಲ್ಲ. ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಅವರು ರುಚಿ ನೋಡಿಕೊಂಡು ಬಿಟ್ಟಿದ್ದಾರೆ, ಇವರೆಲ್ಲಾ ವಲಸೆ ಹೋಗುತ್ತಿದ್ದಾರೆ. ದಯಮಾಡಿ ತಮ್ಮ ಇಲಾಖೆಯಿಂದ ಕಾರ್ಯ ನಿರ್ವಾಹಕ ಅಧಿಕಾರಿಗಳನ್ನು ನೇಮಕ ಮಾಡಿ. ತಾವು ಎಲ್ಲಾ ಇಲಾಖೆಗಳಿಂದ ಎರವಲು ತೆಗೆದುಕೊಂಡಿದ್ದೀರಿ.

ಅಧ್ಯಕ್ಷರು :– ಸಾಕು, ಎಲ್ಲರೂ ಸಾಕಷ್ಟು ವಿಚಾರಗಳನ್ನು ಹೇಳಿದ್ದೀರಿ, ನಾನು ಮುಂದಿನ ಪ್ರಶ್ನೆಯ ಸದಸ್ಯರನ್ನು ಕರೆಯುತ್ತೇನೆ. ಈಗ ಎಲ್ಲರೂ ಸಲಹೆಗಳನ್ನು ಕೊಟ್ಟಿದ್ದಾರೆ. ಸಾಕು.

ಸಾರ್ವಜನಿಕ ಗ್ರಂಥಾಲಯ ಕಟ್ಟಡ ದುರಸ್ಥಿ

20 (143) ಡಾ: ಬಗಲಿ ಸಾರ್ವಭೌಮ ಸಾತಗೌಡ (ಇಂಡಿ):– ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಇಂಡಿ ಪಟ್ಟಣದಲ್ಲಿ ಇರುವ ಅತ್ಯಂತ ಹಳೆಯದಾದ ಸಾರ್ವಜನಿಕ ಗ್ರಂಥಾಲಯ

ಕಟ್ಟಡ ಕುಸಿಯುವ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಸರ್ಕಾರ ಏನು ಕ್ರಮ ಕೈಗೊಳ್ಳಲಿದೆ ;

ಶ್ರೀ ರೇವೂ ನಾಯಕ್ ಬೆಳಮಗಿ (ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು):–

ಅ) ಇಂಡಿ ಪಟ್ಟಣದಲ್ಲಿ ಇರುವ ಶಾಖಾ ಗ್ರಂಥಾಲಯದ ಕಟ್ಟಡವು ಪುರಸಭೆ ಒಡೆತನದಲ್ಲಿದ್ದು ಶಾಖೆ ಪ್ರಾರಂಭವಾದಾಗಿನಿಂದ ಸದರಿ ಕಟ್ಟಡವನ್ನು ಉಚಿತವಾಗಿ ಉಪಯೋಗಿಸಲಾಗುತ್ತಿದೆ. 1995–96ನೇ ಸಾಲಿನಲ್ಲಿ ಈ ಕಟ್ಟಡಕ್ಕೆ ಗ್ರಂಥಾಲಯ ಇಲಾಖೆಯಿಂದ ರಕ್ಷಣಾ ಗೋಡೆ (ಕಾಂಪೌಂಡ್) ನಿರ್ಮಿಸಲಾಗಿದೆ. 2010–11ನೇ ಸಾಲಿನಲ್ಲಿ ಸದರಿ ಗ್ರಂಥಾಲಯದ ಹೆಂಚಿನ ಮೇಲ್ಛಾವಣಿ ದುರಸ್ಥಿಗೊಳಿಸಲಾಗಿದೆ. ಪ್ರಸ್ತುತ ಕಟ್ಟಡವು ಕುಸಿಯುವ ಸ್ಥಿತಿಯಲ್ಲಿ ಇರುವುದಿಲ್ಲ.

ಆ) ಸದರಿ ನಿವೇಶನ ಹಾಗೂ ಕಟ್ಟಡ ಇಂಡಿ ಪುರಸಭೆ ಮಾಲೀಕತ್ವದಲ್ಲಿ ಇರುತ್ತದೆ. ಇಲಾಖೆಯ ಹೆಸರಿಗೆ ನಿವೇಶನ ಇರದೇ ಇರುವುದರಿಂದ, ಸದರಿ ಕಟ್ಟಡದ ಮುಖ್ಯ ದುರಸ್ತಿ ಕಾಮಗಾರಿ ಅಥವಾ ಸದರಿ ನಿವೇಶನದಲ್ಲಿ ಹೊಸ ಗ್ರಂಥಾಲಯ ಕಟ್ಟಡ ನಿರ್ಮಾಣ ಕಾರ್ಯ ಕೈಗೊಳ್ಳಲು ನಿಯಮಾವಳಿಗಳಲ್ಲಿ ಅವಕಾಶವಿರುವುದಿಲ್ಲ.

ಡಾ: ಬಗಲಿ ಸಾರ್ವಭೌಮ ಸಾತಗೌಡ :– ಮಾನ್ಯ ಅಧ್ಯಕ್ಷರೆ, ನಾನು ಕಳೆದ ಎರಡು ತಿಂಗಳುಗಳ ಹಿಂದೆ ಮಾನ್ಯ ಸಚಿವರನ್ನು ಭೇಟಿ ಮಾಡಿ ಗ್ರಂಥಾಲಯ ರಿಪೇರಿಗಾಗಿ ಒಂದು ಪತ್ರವನ್ನು ಕೊಟ್ಟಿದ್ದೆ. ಆಗ ಅವರು ಖಂಡಿತವಾಗಿ ಎರಡು ತಿಂಗಳುಗಳಲ್ಲಿ ರಿಪೇರಿ ಮಾಡಿಸಿ ಕೊಡುತ್ತೇನೆಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಆ ಸ್ಥಳಕ್ಕೆ ಕಮೀಷನರ್‌ರವರನ್ನು ಕರೆಸಿ ಅವರಿಗೂ ಸಹ ಆದೇಶವನ್ನು ಮಾಡಿದ್ದರು. ಆದರೆ ಈಗ ಸನ್ಮಾನ್ಯ ಸಚಿವರು ತಮ್ಮ ಹೇಳಿಕೆಯಿಂದ ಹಿಂದಕ್ಕೆ ಸರಿದಿರುವುದು ದುರದೃಷ್ಟಕರ ಸಂಗತಿಯಾಗಿದೆ. ಇವತ್ತು ಈ ಗ್ರಂಥಾಲಯ ಪುರಸಭೆಯ ಮಾಲೀಕತ್ವದಲ್ಲಿದೆ ಎಂಬ ಕಾರಣವನ್ನು ಕೊಟ್ಟು, ಅಲ್ಲಿ ಗ್ರಂಥಾಲಯ ಕಟ್ಟಡವನ್ನು ಕಟ್ಟಲು ಸಾಧ್ಯವಿಲ್ಲವೆಂಬ ಮಾತನ್ನು ಮಾನ್ಯ ಮಂತ್ರಿಯವರು ಹೇಳುತ್ತಿದ್ದಾರೆ. ಇಂಡಿ ಪುರಸಭೆಯವರು ಸದರಿ ಒಂದು ನಿವೇಶನ ಮತ್ತು ಕಟ್ಟಡವನ್ನು ಗ್ರಂಥಾಲಯ ಇಲಾಖೆಗೆ ವರ್ಗಾಯಿಸಲು ಸಿದ್ದರಿರುತ್ತಾರೆ. ಈ ಹಿನ್ನೆಲೆಯಲ್ಲಿ ಸನ್ಮಾನ್ಯ ಸಚಿವರು ಈ ಗ್ರಂಥಾಲಯದ ನಿವೇಶನ ಮತ್ತು ಕಟ್ಟಡವನ್ನು ತಮ್ಮ ವಶಕ್ಕೆ ತೆಗೆದುಕೊಂಡು ಅಲ್ಲಿ ಹೊಸ

ಕಟ್ಟಡವನ್ನು ಕಟ್ಟಲು ಕ್ರಮ ಕೈಗೊಳ್ಳಬೇಕು. ಈ ವಿಷಯವಾಗಿ ಒಂದು ಖಚಿತವಾದ ಆಶ್ವಾಸನೆಯನ್ನು ಮಾನ್ಯ ಸಚಿವರು ಈ ಸಭೆಯಲ್ಲಿ ಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ರೇವೂ ನಾಯಕ್ ಬೆಳಮಗಿ :– ಮಾನ್ಯ ಅಧ್ಯಕ್ಷರೆ, ಸದರಿ ಶಾಖಾ ಗ್ರಂಥಾಲಯದ ಕಟ್ಟಡವು ಪುರಸಭೆಯ ಒಡೆತನದಲ್ಲಿದ್ದು ಶಾಖೆ ಪ್ರಾರಂಭವಾದಾಗಿನಿಂದ ಸದರಿ ಕಟ್ಟಡವನ್ನು ಉಚಿತವಾಗಿ ಉಪಯೋಗಿಸಲಾಗುತ್ತಿದೆ. 1995–96ನೇ ಸಾಲಿನಲ್ಲಿ ಸದರಿ ಕಟ್ಟಡಕ್ಕೆ ಇಲಾಖೆಯಿಂದ ರಕ್ಷಣಾ ಗೋಡೆ (ಕಂಪೌಂಡ್) ಅನ್ನು ನಿರ್ಮಿಸಲಾಗಿದೆ. 2010–11ನೇ ಸಾಲಿನಲ್ಲಿ ಸದರಿ ಗ್ರಂಥಾಲಯದ ಹೆಂಚಿನ ಮೇಲ್ಛಾವಣಿಯನ್ನು ದುರಸ್ಥಿಗೊಳಿಸಲಾಗಿದೆ. ಪ್ರಸ್ತುತ ಕಟ್ಟಡವು ಕುಸಿಯುವ ಸ್ಥಿತಿಯಲ್ಲಿರುವುದಿಲ್ಲ. ಸದರಿ ಗ್ರಂಥಾಲಯದ ಕಟ್ಟಡದಲ್ಲಿ ಇಲಾಖೆಗೆ ಪೂರ್ತಿ ಮಾಲೀಕತ್ವದಲ್ಲಿ ಇಲ್ಲದೇ ಇರುವುದರಿಂದ ಪ್ರಸ್ತುತ ಹೊಸ ಕಟ್ಟಡ ಕಟ್ಟುವ ಸ್ಥಿತಿಯಲ್ಲಿ ಇಲ್ಲ. ಆದರೂ ಕೂಡ ನಾನು ನಮ್ಮ departmentನ DD ಯವರು ಮತ್ತು ಜೊತೆಯಲ್ಲಿ ಇಂಜಿನಿಯರ್‌ರವರನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿ ನೋಡಿದ್ದು, ಈ ದುರಸ್ತಿ ಕೆಲಸ ಸರಿಯಾಗಿದೆಯೇ ಎಂಬ ಬಗ್ಗೆ ರಿಪೋರ್ಟ್ ಕೊಟ್ಟಿದ್ದಾರೆ. ಈ ವರದಿಯಲ್ಲಿ ದುರಸ್ಥಿ ಕೆಲಸ ಸರಿಯಾಗಿಲ್ಲವೆಂದು ಇದ್ದರೆ ಹೊಸ ಕಟ್ಟಡವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ರಾಜ್ಯದಲ್ಲಿರುವ ಇಂಜಿನಿಯರಿಂಗ್ ಕಾಲೇಜುಗಳಿಗೆ ಮೂಲ ಸೌಲಭ್ಯ

21 (384) ಶ್ರೀ ಹೆಚ್. ಡಿ. ರೇವಣ್ಣ (ಹೊಳೆನರಸೀಪುರ):– ಮಾನ್ಯ ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಮುಜರಾಯಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ಕಾಲೇಜುಗಳ ಪೂರ್ಣ ಮಾಹಿತಿ ನೀಡುವುದು).

ಆ) ರಾಜ್ಯದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಬೋಧಿಸುತ್ತಿರುವ ಕೋರ್ಸುಗಳು ಯಾವುವು ? (ಜಿಲ್ಲಾವಾರು ಕಾಲೇಜುಗಳ ಮಾಹಿತಿ ನೀಡುವುದು).

ಇ) ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಬೋಧಿಸಲು ವಿವಿಧ ಕೋರ್ಸುಗಳಲ್ಲಿ ಖಾಲಿ ಇರುವ ಖಾಯಂ ಉಪನ್ಯಾಸಕರು ಹಾಗೂ ಇತರೆ ಸಿಬ್ಬಂದಿಗಳ ಹುದ್ದೆಗಳು ಎಷ್ಟು ? (ಪೂರ್ಣ ಮಾಹಿತಿ ನೀಡುವುದು).